ಬೆಂಗಳೂರಿನ ಅಶೋಕಪುರಂ ಬಡಾವಣೆಯಲ್ಲಿ ಎ. ಪಿ. ವಿದ್ಯಾ ಸಂಸ್ಥೆಯು ನಡೆಸುತ್ತಿರುವ ಪ್ರೌಢಶಾಲೆಯ ಆವ್ಯವಸ್ಥೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಅಶೋಕಪುರಂ ಬಡಾವಣೆಯಲ್ಲಿ ಎ. ಪಿ. ವಿದ್ಯಾ ಸಂಸ್ಥೆಯು ನಡೆಸುತ್ತಿರುವ ಪ್ರೌಢಶಾಲೆಯ ಆವ್ಯವಸ್ಥೆ ಹಾಗೂ ಅವ್ಯವಹಾರಗಳ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

೩-೩೦ ಪಿ. ಎಂ.

ಶ್ರೀ ಡಿ. ಮಂಜುನಾಥ್.—(ಮಾನ್ಯ ಶಿಕ್ಷಣ ಮಂತ್ರಿಗಳು)—.ಮಾನ್ಯ ಅಧ್ಯಕ್ಷರೇ ಹೇಳಿಕೆ ಈ ರೀತಿ ಇದೆ.

ಬೆಂಗಳೂರು ಅಶೋಕಪುರಂನಲ್ಲಿರುವ ಎ. ಪಿ. ಪ್ರೌಢಶಾಲೆಯು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಆಡಳಿತ ಮಂಡಳಿಯ ಶಾಲೆಯಾಗಿದ್ದು, ಅದು ಪ್ರಾರಂಭವಾದ ದಿನಾಂಕದಿಂದಲೂ (ಅಂದರೆ ೧೯೮೩-೮೪) ಅನುದಾನಕ್ಕೆ ಒಳಪಟ್ಟಿರುತ್ತದೆ. ಈ ಶಾಲೆಯಲ್ಲಿನ ಸಿಬ್ಬಂದಿ ವರ್ಗದವರ ವೇತನವನ್ನು ಶ್ರೀ ಡಿ. ಚಂದ್ರಶೇಕರ್, ದೈಹಿಕ ಶಿಕ್ಷಕ ಸರ್ಕಾರಿ ಕಿರಿಯ ಮಾದರಿ ಪ್ರಾಥಮಿಕ ಶಾಲೆ, ಚಾಮರಾಜಪೆಟೆ, ಬೆಂಗಳೂರು ಇವರು ಸಿಬ್ಬಂದಿ ವರ್ಗದವರ ಹೆಸರಿನಲ್ಲಿ ರಾಜಾಜಿನಗರದ ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ಪ್ರಾರಂಭಿಸಿ, ಈ ನಕಲಿ ಖಾತೆಗಳಿಗೆ ಸಿಬ್ಬಂದಿ ವರ್ಗದವರ ವೇತನವನ್ನು ಜಮೆ ಮಾಡಿ ಹಣ ದುರುಪಯೋಗ ಮಾಡಿರುವರೆಂದು ದೂರು ಬಂದಿದೆ.

ಈ ವಿಚಾರವಾಗಿ ಇಲಾಖೆಯು ವಿಚಾರವಾಗಿ ತನಿಖೆಯನ್ನು ನಡೆಸಿದಾಗ, ಆರೋಪಗಳನ್ನು ರುಜುವಾತು ಪಡಿಸುವಲ್ಲಿ ಕೆಲವು ತಾಂತ್ರಿಕ ಅಡಚಣೆಗಳು ಕಂಡು ಬಂದಿದ್ದರಿಂದ, ಸದರಿ ವಿಚಾರವನ್ನು ಸಿ.ಓ.ಡಿ.ಗೆ ಒಪ್ಪಿಸಿ ತನಿಖೆ ಮಾಡಿಸುವ ಸಲುವಾಗಿ ಸಾರ್ವಜನಿಕ ಶಿಕ್ಷಣ ಆಯುಕ್ತರು ಸರ್ಕಾರಕ್ಕೆ ಪ್ರಸಾವನೆಯನ್ನು ಸಲ್ಲಿಸಿದು, ಆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸದರಿ ಶಾಲೆಯು ಆಡಳಿತ ಮಂಡಳಿಯಲ್ಲಿ ಈ ಹಿಂದೆ ಕಾರ್ಯದರ್ಶಿಯಾಗಿದ್ದ ಶ್ರೀ ರಾಜಶೇಖರ್ ಎಂಬುವವರನ್ನು ಆ ಸ್ಥಾನದಿಂದ ತೆಗೆದುಹಾಕಿ, ಶ್ರೀ ನಪನೀತವ್ ಎಂಬುವವರನ್ನು ನೇಮಕ ಮಾಡಿದ್ದರಿಂದಲೂ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗಗಳ ನಡುವೆ ಬಿನ್ನಾಭಿಪ್ರಾಯ ಇದ್ದುದರಿಂದ ಹಾಗೂ ಶಾಲೆಯಲ್ಲಿ ಖಾಯಂ ಮುಖ್ಯೋಪಾಧ್ಯಾಯರು ಇಲ್ಲದಿರುವುದರಿಂದಲೂ, ಸಿಬ್ಬಂದಿ ವರ್ಗದವರ ವೇತನ ವಿಲೇವಾರಿಗೆ ತೊಂದರೆ ಆಗಬಾರದೆಂದು ಸದರಿ ಶಾಲೆಗೆ ವೇತನ ವಿಲೇವಾರಿ ಅಧಿಕಾರಿಯವರನ್ನು ನೇಮಿಸಲಾಗಿದೆ. ಆದರೂ ಸಹ, ಶಾಲೆಯ ಸಿಬ್ಬಂದಿ ವರ್ಗದವರು ಹಿಂದಿನ ಕಾರ್ಯದರ್ಶಿ ಶ್ರೀ ರಾಜಶೇಖರ್ ಅವರೊಂದಿಗೆ, ಸದರಿ ಶಾಲೆಯಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಇದೇ ಹೆಸರಿನಲ್ಲಿ ಮಹಾಲಕ್ಷ್ಮೀ ಲೇ ಔಟ್‌ನ ಜರಕ್‌ಬಂಡೆ ಕಾವಲ್‌ನಲ್ಲಿ ದಿನಾಂಕ ೧೭-೧೧-೧೯೮೬ ರಿಂದ ಇಲಾಖೆಯ ಪೂರ್ವಾನುಮತಿ ಪಡೆಯದೆ ಶಾಲೆಯನ್ನು ಪ್ರಾರಂಭಿಸಿರುತ್ತಾರೆ. ಈ ಕಾರಣದಿಂದ ಸಿಬ್ಬಂದಿಯವರ ವೇತನವನ್ನು ಬಿಡುಗಡೆ ಮಾಡಲು ತೊಂದರೆ ಉಂಟಾಗಿದೆ. ಸದರಿ ಕಾರಣಗಳಿಂದ ಈ ಪ್ರಕರಣದಲ್ಲಿ ಸಮಗ್ರ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಬೆಂಗಳೂರು ಉತ್ತರ ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿದೆ.

ಈ ಮಧ್ಯೆ, ಶಾಲೆಯ ಸಿಬ್ಬಂದಿಯವರು ತಮಗೆ ಪ್ರಾಣಾಪಾಯದ ಭಯವಿದೆ ಎಂಬುದಾಗಿ ಮನವಿಯಂನ್ನು ಸಲ್ಲಿಸಿದ್ದರಿಂದ, ಅವರಿಗೆ ರಕ್ಷಣೆ ಕೊಡಲು ಪೋಲೀಸ್ ಉಪಯುಕ್ತರಿಗೂ ಪತ್ರ ಬರೆಯಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಶ್ರೀ ಚಂದ್ರಶೇಖರ್ ಎಂಬುವವರು ಕೈಚ್ಚಿಯನ್‌ರಾಗಿದ್ದು ಪೆಡ್ಡೂಲ್ಡ್ ಕ್ಯಾಸ್ಟ್ ಎಂದು ಹೇಳಿ ಕೊಂಡು ಈ ದುರುಪಯೋಗವನ್ನು ಮಾಡಿದ್ದಾರೆ ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಶ್ರೀ ರಾಜಶೇಖರ್ ಎನ್ನುವವರು ಕಾರ್ಯದರ್ಶಿಯಾಗಿದ್ದವರು, ಅವರು ಶಾಲಾ ಟೀಚರ್ಸ್‌ಗಳ ಹೆಸರಿನಲ್ಲಿ ಫೋರ್ಜರಿ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ಎಲ್ಲಾ ತೊಂದರೆಯನ್ನು ಅನುಭವಿಸಿದ ನಂತರ ಶಾಲೆಯ ಶಿಕ್ಷಕರು ಬೇರೆ ಕಟ್ಟಡದಲ್ಲಿ ಶಾಲೆಯನ್ನು ಪ್ರಾರಂಭ ಮಾಡಿದರೂ ಕೂಡ ಯಾರದೋ ಕುಮ್ಮಕ್ಕಿನಿಂದ ಅವರ ವೇತನವನ್ನು ನಿಲ್ಲಿಸಿ ಈ ಶಿಕ್ಷಕರಿಗೆ ತೊಂದರೆಯಾಗಿ ವಿಶೇಷವಾಗಿ ಅನಾನುಕೂಲವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಮತ್ತು ಸಿ. ಓ. ಡಿ. ತನಿಖೆಯನ್ನು ಮಾಡಿಸು

ತ್ತೇವೆಂದು ಹೇಳಿದ್ದಾರೆ, ಆ ವರದಿ ಎಷ್ಟು ದಿವಸದಲ್ಲಿ ಬರುತ್ತದೆ ಮತ್ತು ಆಷ್ಟರವರೆಗೆ ಆ ಶಿಕ್ಷಕರ ಗತಿ ಏನು ?

ಶ್ರೀ ಡಿ. ಮಂಜುನಾಥ್.—ಆದರಲ್ಲಿ ವಿಷೇಷವಾಗಿ ಮ್ಯಾನೆಜ್‌ಮೆಂಟಿನಲ್ಲಿ ಒಬ್ಬರೊಬ್ಬರಿಗೆ ಜಗಳ ಇದೆ ಆದರಿಂದಾಗಿ ಶಿಕ್ಷಕರಿಗೆ ತೊಂದರೆಯಾಗಬಾರದೆಂದು ಇದನ್ನು ತನಿಖೆ ಮಾಡಲು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ. ಆದಷ್ಟು ಜಾಗ್ರತೆ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲು ಕಾರ್ಯದರ್ಶಿಯಾಗಿದ್ದವರನ್ನು ತೆಗೆದುಹಾಕಿದ್ದಕ್ಕೆ ಅವರು ಹೊಸಗಿ ಬೇರೆ ಶಾಲೆಯನ್ನು ಪ್ರಾರಂಭ ಮಾಡಿದ್ದಾರೆ. ಸರಕಾರ ಆದಕ್ಕೆ ಅನುಮತಿ ಕೊಟ್ಟಿಲ್ಲ. ಅವರಿಗೆ ತೊಂದರೆ ಯಾಗುತ್ತದೆಂದು ವೇತನ ವಿತರಣೆ ಮಾಡಲು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ ಹಾಗೂ ಅವರಿಗೆ ರಕ್ಷಣೆ ಕೊಡಬೇಕೆಂದು ಪೋಲಿಸರಿಗೂ ಸಹ ತಿಳಿಸಿದ್ದೇವೆ. ತನಿಖೆ ನಡೆಸಿ ಆದಷ್ಟು ಬೇಗ ವರದಿಯನ್ನು ಕೊಡುವಂತೆ ಸಂಬಧಪಟ್ಟ ಸಿ. ಓ. ಡಿ. ಅಧಿಕಾರಿಗಳಿಗೆ ತಿಳಿಸುತ್ತೇನೆ.

ಅಧ್ಯಕ್ಷರು.—ಶ್ರೀ ಜಿ. ಎಸ್. ಆಚಾರ್ ಮತ್ತು ಶ್ರೀ ಜಯಕುಮಾರ್‌ರವರು ನಿರಿಡುವಗಮನ ಸೆಳೆಯುವ ಸೂಚನೆಯನ್ನು ನಾಳೆಗೆ ಮುಂದೂಡಲಾಗಿದೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೮೭ನೇ ಇಸವಿಯ ದಂಡ ಪಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್. ಡಿ. ದೇವೇಗೌಡ (ಗೃಹಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಇಸವಿಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್. ಡಿ. ದೇವೇಗೌಡ (ಗೃಹ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ದಂಡ ಪಕ್ರೀಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.